**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

**SC.148 /2020**

ಸಾಕ್ಷಿದಾರರ ಹೆಸರು : ತಿಮ್ಮಪ್ಪ ಟಿ

ತಂದೆಯ/ಗಂಡನ ಹೆಸರು : ಪೂಜಾರಿ ತಿಮ್ಮಣ್ಣ

ವಯಸ್ಸು : 38 ವರ್ಷ

ಉದ್ಯೋಗ : ಪೋಲೀಸ್ ಪೇದೆ 157, ಮಾಯಕೊಂಡ ಪೋಲೀಸ್

ವಾಸ ಸ್ಥಳ : ಹೊನ್ನೂರು ಗೊಲ್ಲರಹಟ್ಟಿ ದಾವಣಗೆರೆ ತಾಲ್ಲೂಕು

ಪಿ.ಡಬ್ಲ್ಯೂ 6

ಸಿ.ಡಬ್ಲ್ಯೂ 26

ದಿ: 10.12.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಮಂಜುನಾಥ ಬಿ)**:

1. ಮಾಯಕೊಂಡ ಪೋಲೀಸ್ ಠಾಣೆಯಲಿ 06 ವರ್ಷಗಳಿಂದ ಅಂದರೆ 2019 ರಿಂದ ಇದುವರೆಗೂ ಪೋಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಈ ಪ್ರಕರಣದಲ್ಲಿ ದಿನಾಂಕಃ 08.09.2020 ರಂದು ನನ್ನ ಮೇಲಾಧಿಕಾರಿಗಳ ಮೌಖಿಕ ಆದೇಶದ ಮೇರೆಗೆ ಸದರಿ ದಿನದಂದು ಲೋಕೋಪಯೋಗಿ ಇಲಾಖೆಯ ಇಂಜಿನಿಯರ್ ಆದ ಲಕ್ಷ್ಮಣ್ - ಚಾಸಾ-24 ರವರನ್ನು ಕರೆದುಕೊಂಡು ಕೃತ್ಯ ನಡೆದ ಸ್ಥಳಕ್ಕೆ ಕರೆದುಕೊಂಡು ಹೋಗಿ ನಕ್ಷೆ ತಯಾರಿಸುವಂತೆ ನನ್ನ ಮೇಲಾಧಿಕಾರಿಗಳು ನನಗೆ ತಿಳಿಸಿದರು. ಅದರಂತೆ ನಾನು ಚಾಸಾ-24 ರವರಿಗೆ ಶಂಕರ್ ಹಳ್ಳಿ ಗ್ರಾಮದ ಸರ್ವೆ ನಂಬರ್ 25/3 ರ 1 ಎಕರೆ ಚಿಲ್ಲರೆ ಗುಂಟೆ ಜಮೀನಿನಲ್ಲಿ ಕರೆದುಕೊಂಡು ಹೋಗಿ ನಕಾಶೆ ಬೇಕು ಎಂದು ಇಂಜಿನಿಯರ್ ರವರಿಗೆ ತಿಳಿಸಿದೆನು ಸದರಿ ನಕಾಶೆಯು 304 ಐಪಿಸಿ ಪ್ರಕರಣಕ್ಕೆ ಸಂಬಂದಿಸಿದ್ದು ಇರುತ್ತದೆ ಎಂದು

ತಿಳಿಸಿದೆನು. ಆ ಸರ್ವೆ ನಂಬರ್ ಜಮೀನಿನ ಮಾಲೀಕರ ಹೆಸರು ಲಲಿತಮ್ಮ ಕೋಂ ಜಯಪ್ಪ ರವರದ್ದಾಗಿರುತ್ತದೆ. ಸದರಿ ಸ್ಥಳದಲ್ಲಿ ಕಲ್ಲು ಗಣಿಗಾರಿಕೆ ನಡೆದಿದ್ದು ಗುಂಡಿ ತುಂಬಾ ನೀರು ತುಂಬಿತ್ತು. ಯಾವುದೇ ರೀತಿಯ ಕಾಂಪೌಂಡ್, ಬೇಲಿ ಹಾಗೂ ಮುನ್ನಚ್ಚರಿಕೆಯ ಬೋರ್ಡ್ ಏನೂ ಇರುವುದಿಲ್ಲ. ಅದರ ಸುತ್ತಲೂ ಜಾಲಿ ಗಿಡಗಳು ಬೆಳೆದಿತ್ತು. ಚಾಸಾ-24 ರವರು ಆ ಸ್ಥಳವನ್ನು ನೋಡಿ ನಕಾಶೆಯನ್ನು ತಯಾರಿಸಿದರು. ನಾನು ಆ ಸ್ಥಳವನ್ನು ತೋರಿಸಿದೆನು. ಅವರು ತಯಾರಿಸಿದ ನಕ್ಷೆ ಈಗ ನಾನು ನೋಡುತ್ತಿದ್ದು ಅದನ್ನು ನಿಪಿ- 9 ಎಂದು ಗುರುತಿಸುತ್ತೇನೆ. ಅದರಲ್ಲಿನ ಸಹಿಯನ್ನು ನಿಪಿ-೯(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ . ಇ ಎಫ್ , ವಕೀಲರಿಂದ ಆರೋಪಿತರ ಪರವಾಗಿ**:

2. ಆ ಸ್ಥಳವನ್ನು ನಾನು ಮೇಲಾಧಿಕಾರಿಯವರು ನೀಡಿದ ಆದೇಶದಲ್ಲಿ ಪೂರ್ವದಲ್ಲಿ ಹೋಗಿ ನೋಡಿರುವುದಿಲ್ಲ. ಮೇಲಾಧಿಕಾರಿಗಳು ನಿಖರವಾದ ಸರ್ವೆ ನಂಬರ್ ಗೆ ಹೋಗಲು ದಾಖಲೆಯನ್ನು ಕೊಟ್ಟಿರುವುದಿಲ್ಲ. ಚಾಸಾ-24 ರವರ ಕಚೇರಿಯು ದಾವಣಗೆಯಲ್ಲಿ ಇದೆ. ಆ ದಿನ ನಮಗೆ ಮಾಹಿತಿಯನ್ನು ಇನ್‌ಸ್ ಪೆಕ್ಟ್ ರವರು ನೀಡಿದಾಗ ಸಮಯ ಬೆಳಿಗ್ಗೆ 10-00 ಗಂಟೆ ಆಗಿತ್ತು. ದಾವಣಗೆರೆಗೆ ಬಂದಾಗ ಬೆಳಿಗ್ಗೆ 10-30 ಗಂಟೆ ಆಗಿತ್ತು. ಚಾಸಾ-24 ರವರ ಬಳಿ ನಿಖರವಾದ ಸರ್ವೆ ನಂಬರಂತಹ ಏನಾದರೂ ದಾಖಲೆ ನೋಡಿದ್ದೀರ ಎಂದರೆ ಚಾಸಾ-24 ರವರ ಬಳಿ ಒಂದು ಕಡತ ಇತ್ತು. ತನಿಖಾದಿಕಾರಿಯವರಿಗೆ ನಾನು ಮುಖ್ಯ ವಿಚಾರಣೆಯ ಬಗ್ಗೆ ಹೇಳಿಕೆಯನ್ನು ನೀಡಿಲ್ಲ. ನಕಾಶೆಯಲ್ಲಿ ನಿಖರವಾದ ಸರ್ವೆ ನಂಬರ್ ನಮೂದಾಗಿದೆ.

3. ನಕಾಶೆ ತಯಾರಿಸುವಾಗ ವಿಲೇಜ್ ಅಕೌಂಟೆಂಟ್ ಹಾಗೂ ಶಂಕರ್ ಹಳ್ಳಿ ಗ್ರಾಮಸ್ಥರು ಇದ್ದರು. ವಿಲೆಜ್ ಅಕೌಂಟೆಂಟ್ ಮತ್ತು ಗ್ರಾಮಸ್ಥರಿಗೆ ಯಾರು ಕರೆಸಿದ್ದರು ನನಗೆ ಗೊತ್ತಿಲ್ಲ. ನಾವು ಸ್ಥಳಕ್ಕೆ ಹೋದಾಗ ಗ್ರಾಮ ಲೆಕ್ಕಾದಿಕಾರಿ ಹಾಗೂ ಗ್ರಾಮಸ್ಥರು ಬಂದರು. ನಾನು ಮುಖ್ಯ ವಿಚಾರಣೆಯಲ್ಲಿ

ಹೇಳಿದ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ. ಚಾಸಾ-24 ರವರನ್ನು ಆ ದಿನ ನಾನು ಕರೆದುಕೊಂಡು ಹೋಗಿಲ್ಲ ಎಂದರೆ ಸುಳ್ಳು. ಸ್ಥಳದಲ್ಲಿ ನಿಪಿ-9 ರಂತೆ ನಕಾಶೆ ತಯಾರಿಸಿಲ್ಲ ಎಂದರೆ ಸುಳ್ಳು. ಚಾಸಾ-24 ರವರ ಕಚೇರಿಯಲ್ಲಿ ತಯಾರಿಸಿದ ನಕಾಶೆಗೆ ನಾನು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಪ್ರಕರಣದ ಬಗ್ಗೆ ನನಗೆ ಏನೂ ಮಾಹಿತಿ ಇಲ್ಲದಿದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.